ವಾಚಾಮನಸಾ ಎಲ್ಲರೂ ಅನುಭವಕ್ಕೆ ತಂದುಕೊಂಡು ಆ ಶಬ್ದಗಳ ಅರ್ಥಕ್ಕೆ ಸರಿಯಾದ ಜೀವನವನ್ನು ರೂಢಿಸುವುದಕ್ಕೆ ಒಬ್ಬೊಬ್ಬರಿಗೇ ಸಾಧ್ಯವಾಗುವುದಿಲ್ಲ. ಅದನ್ನು ನಾನೂ ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಆ ರೀತಿಯಾದ ಒಂದು ಸಮಾನತೆಯ ಸಮಾಜವನ್ನು, ಒಂದು ಭ್ರಾತೃತ್ವ ಇರತಕ್ಕ ಸಮಾಜವನ್ನು, ಆ ಮಾತಿನಲ್ಲಿ ಬರತಕ್ಕ ಒಂದು ಸ್ವತಂತ್ರವಾಗಿರತಕ್ಕ ಸಮಾಜವನ್ನು ರಚನೆ ಮಾಡುವುದಕ್ಕೆ ಜವಾಬ್ದಾರಿಯನ್ನು ಹೊತ್ತಿರತಕ್ಕವರು ನೀನೇನು ಪ್ರಯತ್ನಗಳನ್ನು ಮಾಡಿದ್ದೀರಿ, ಮಾಡುತ್ತಾ ಇದ್ದೀರಿ ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಅದನ್ನು ನೋಡಿದರೆ ಈ ಬಿಲ್ಲು ತಮಗೆ ಒಂದು ಸಾಕ್ಷಿ ಹೇಳತಕ್ಕದ್ದಾಗಿದೆ; ಬಹಳ ವಿಳಂಬ ಮಾಡಿದ್ದೀರಿ ಎಂಬುದನ್ನು ತೋರಿಸುತ್ತದೆ. ಮನಸ್ಸಿತ್ತೋ ಇಲ್ಲವೋ ಎಂಬುದನ್ನು ಪ್ರಶ್ನೆಮಾಡಿ ನೋಡಬೇಕಾಗಿಲ್ಲ. ರೈತರನ್ನು ರಕ್ಷಣೆ ಮಾಡಬೇಕು, ಎಲ್ಲರಿಗೂ ಸಮಾನವಾದ ಹಕ್ಕುಬಾಧ್ಯತೆಗಳನ್ನು ಕಲ್ಪಿಸಿಕೊಡಬೇಕೆಂಬುದೇ ನಮ್ಮ ಉದ್ದೇಶ, ರಾಜ್ಯಾಂಗದ ವಿಧಿಗಳನ್ನು ಚಾಚೂ ತಪ್ಪದೆ ಅನುಸರಿಸುವುದೇ ನಮ್ಮ ಉದ್ದೇಶ ಎಂದು ಹೇಳುತ್ತೀರಿ. ಆದರೆ ಆವೊತ್ತು ನೀವುಗಳು ಕೊಟ್ಟ ಕಾರಣಗಳನ್ನೇ ಕೊಟ್ಟರೂ ಬಹುಶಃ ನೀವು ಒಪ್ಪದೆ ಇರುವುದಿಲ್ಲ—ಈ ಇನಾಂಗಳನ್ನೂ ಕಿತ್ತುಕೊಳ್ಳಬೇಕಾಗಿಲ್ಲ ಎಂದು ವಾದ ಹೂಡುತ್ತಾ ಹೋದರೆ ನನಗಾಗಲಿ ಮತ್ತೊಬ್ಬರಿಗಾಗಲಿ ಕಾಲ ನಿಂತುಕೊಳ್ಳುವುದಿಲ್ಲ, ಅದೇರೀತಿ ಒಂದು ದೊಡ್ಡ ಸೈನ್ಯ ಮುತ್ತಿಗೆ ಹಾಕುವುದಕ್ಕೆ ಬಂದಾಗ ಇನಾಂ ಅಬಾಲಿಷ್ ಮಾಡುತ್ತಾರೆ, ಸ್ವಲ್ಪ ತಡೆಯಿರಿ ಎಂದರೆ ತಡೆಯುವುದಿಲ್ಲ. ಎಷ್ಟೋ ಜನ ಇತ್ತೀಚಿನ ಹೋರಾಟದಲ್ಲಿ actual ಆಗಿ ನಮ್ಮನ್ನೆ ಹೋರಾಟ ಮಾಡಿದರು, ಅದು ಬೇರೆ ಪ್ರಶ್ನೆ; ಆ ರೀತಿ ಹೋರಾಟ ಮಾಡಿದವರಲ್ಲಿ ಅನೇಕರು ಮನೆಗೆ ಹೋಗಲಿಲ್ಲ. ಹಾಗಾದರೆ ಇನ್ನೆಲ್ಲಿಗೆ ಹೋದರು? ಜೈಲಿಗೆ ಹೋದರು, ನಮ್ಮ ಸರ್ಕಾರ ಬಂದು ನಮಗೆ ಹಿತಯುತವಾದ ಒಂದಷ್ಟು ಕೆಲಸ ಮಾಡುತ್ತದೆ ಎನ್ನುವ ಒಂದು ಆಕಾಂಕ್ಷೆಯನ್ನು ತಮ್ಮಲ್ಲಿ ಇಟ್ಟಿದ್ದುಂಟ ಆ ಜನರ ಗತಿ ಏನಾಯಿತು ಎಂಬುದನ್ನು ತಾವು ಸ್ವಲ್ಪ ಆಗಿಂದಾಗ್ಗೆ ಯೋಚನೆ ಮಾಡುವುದು ಒಳ್ಳೆಯದು, ತಮ್ಮ ಗಮನ ಅವರ ಕಡೆಗೆ ಹೋಗುವುದು ಒಳ್ಳೆಯದು. ಆ ಜನರು ಯಾರಿದ್ದಾರೆ, ಅವರ ಪಾಡು ಏನಾಗಿದೆ, ಅವರಿಗೇನಾದರೂ ನೀವು ಸಹಾಯ ಮಾಡಿದ್ದೀರಾ ಎಂಬುದನ್ನು ನೋಡಿದರೆ, ಬಹಳ ವಿಷಾದದಿಂದ ಹೇಳಬೇಕಾಗುತ್ತದೆ, ಅನೇಕರು ಅದೇ ನಿರೀಕ್ಷಣೆಯಲ್ಲೇ ಸತ್ತುಹೋದರು. ಇದು ಹೇಗಿದೆ ಎಂದರೆ ವರ್ಡ್ಸ್‌ವರ್ತ್ ಕವಿ ಮೈಕೇಲ್ ಎಂಬ ಕಥೆಯನ್ನು ಬರೆದಿದ್ದಾನೆ. ಅದರಲ್ಲಿ ಮೈಕೇಲ್ ಅನ್ನುವವನು ತನ್ನ ತಂದೆಗೆ, ಪೇಟೆಗೆ ಹೋಗುತ್ತೇನೆ, ಕೆಲವು ದಿವಸ ಅಲ್ಲಿದ್ದು ಬರುತ್ತೇನೆ, ಮನೆಗೆ ಬೇಕಾದ ಸಾಮಾನು ತರುತ್ತೇನೆ ಎಂದು ಹೇಳಿ ಹೋಗಿರುತ್ತಾನೆ. ಬಹಳ ದಿವಸ ಆಯಿತು, ಅವನು ಪಾಪನು ಬರುವುದೇ ಇಲ್ಲ. ಅವನ ನಿರೀಕ್ಷಣೆಯನ್ನೇ ಮಾಡುತ್ತಾ ಹೊಟ್ಟೆಗೆ ಇಲ್ಲದೆ ಆ ಮುದುಕ ಸತ್ತುಹೋಗುತ್ತಾನೆ. ಅಂಥ ಸಂದರ್ಭಗಳು, ಉದಾಹರಣೆಗಳು ನಮ್ಮ ದೇಶದಲ್ಲಿ 1947ರಿಂದ ಈಚೆಗೆ ಬಹಳವಾಗಿ ಇವೆ. ಏಕೆಂದರೆ ನಿರಾಶೆಯಿಂದ ಬದುಕುವುದು ಒಂದು ರೀತಿ; ಬೆಳಿಗ್ಗೆಯಿಂದ ಕಷ್ಟಪಟ್ಟರೂ ಏನೂ ಪ್ರಯೋಜನವಿಲ್ಲವಲ್ಲ ಎಂದು ಬದುಕುವುದು ಒಂದು ರೀತಿ. ಯಾವ ಆಶೆಯೂ ಇಲ್ಲ ಎಂದು ಬದುಕುವವರಿಗೆ, ನಿರಾಶಾಮಯವಾದ ಜೀವನ ಹಾಗೆಯೇ ನಡೆದುಕೊಂಡುಹೋಗಿ ನಿರುತ್ಸಾಹಿಗಳಾಗಿರುತ್ತಾರೆ. ಅವರನ್ನೂ ನೋಡಿ; ಅದೇ ಯಾರೋ ಬರುತ್ತಾರೆ, ಯಾರಿಂದಲೋ ಅನುಕೂಲವಾಗುತ್ತದೆ ಎಂಬ ಒಂದು ಆಶೆಯನ್ನಿಟ್ಟುಕೊಂಡು ಬದುಕು ಮಾಡುವವರನ್ನೂ ನೋಡಿ. ಆರೀತಿ ಒಂದು ಆಶೆ ಈಡೇರದೇ ಹೋದಾಗ, ನಿರಾಶನಾದಾಗ ಅಂಥವನ ಜೀವನ ಕುಸಿದು ಬೀಳುತ್ತದೆ, shock ಹೊಡೆಯುತ್ತದೆ.

5 P.M.

ಇನ್ನೂ 50 ವರ್ಷಗಳು ಬದುಕಬೇಕೆಂಬ ಆಸೆಯಿರುವವನು ನಿರಾಶೆಯಾದಾಗ ಸಾಯುತ್ತಾನೆ. ನಾನು ಹೇಳಿದಹಾಗೆ, 1915ನೆಯ ಇಸವಿಯಿಂದ ಜೋಡಿ, ಜಹಗೀರಿ, ಇನಾಂ ಮುಂತಾದುವುಗಳಲ್ಲಿರುವ ರೈತರು, ಬಂಧಮುಕ್ತಿಯಾಗುತ್ತದೆ, ಸರ್ಕಾರವೇ ನಾದರೂ ಮಾಡಿ ಹಕ್ಕುಬಾಧ್ಯತೆ ಕೊಡಿಸುತ್ತಾರಂತೆ ಎಂದು ನಿರೀಕ್ಷೆ ಮಾಡಿರುವವರು ಎಷ್ಟೋ ಜನ ಅದು ಈಡೇರದೆ ಸತ್ತುಹೋಗಿದ್ದಾರೆ; ಇದಾಗ ಬಾರದು. ಇದಕ್ಕೆ ಆಶ್ವಾಸನೆಗಳನ್ನು ಕೊಡದೇ ಹೋದರೆ, ಈ ಕೆಲಸ ಮಾಡುತ್ತೇವೆಂದು ಹೇಳದೇ ಹೋದರೆ ಪರಮ ಸುಖ. ಹೇಳಿದ್ದರೆ ಯಾವ ತರಹದ ಸರ್ಕಾರ ಏನು ಕೆಲಸ ಮಾಡುತ್ತದೆಯೆಂಬುದು ಸ್ಪಷ್ಟವಾಗಿರುವುದಿಲ್ಲ. ಇಂಥಾದ್ದು ಮಾಡುತ್ತೇವೆ, ಇಂಥಾದ್ದು ಮಾಡುವುದಿಲ್ಲ ಎಂದು ಏನಾರು ವಿಷಯ ಹೇಳಿದರೆ ನಿಮ್ಮನ್ನು ಕಾಡಿಸುವುದಿಲ್ಲ, ಜಮೀನು ಮಂಜೂರು ಮಾಡುತ್ತೇವೆ, ಈ ದಿವಸ ನಮ್ಮ ಮನೆಗೆ ಬಾ ಎಂದು ಹೇಳಿ ಕೊಡದೆ ಕಾಡಿಸುವುದಕ್ಕಿಂತ ನಮ್ಮಲ್ಲಿ ಈಗ ಭೂಮಿಯಿಲ್ಲವೆಂದು ಬೋರ್ಡು ಹಾಕಿಬಿಟ್ಟರೆ ಆ ಚೀಟಿ ನೋಡಿ ಹೊರಟುಹೋಗುತ್ತಾರೆ, ಅದನ್ನು ನೋಡಿದಮೇಲೆ ಮಾತನಾಡುವುದಕ್ಕೆ ಕೂಡ ಅವಕಾಶವಿರುವುದಿಲ್ಲ.

MYSORE SALES TAX (AMENDMENT) BILL, 1954.

Extension of time for presentation of Report.

Sri Kadidal MANJAPPA (Minister for Revenue and Public Works).—Sir, on behalf of the Chairman I move :

> "That the time prescribed for the presentation of the Report of the Select Committee on the Mysore Sales Tax (Amendment) Bill, 1954, be extended up to the 9th April 1954."

Sir, the Select Committee has not been able to complete its work within the time prescribed. A number of interests have given evidence and the points raised in the House and by the persons who gave evidence require detailed consideration. Hence this extension prayed for.

Sri A. BHEEMAPPA NAIK (Molakalmuru).—I am afraid it may not be possible to present even on that day. I request the Speaker to extend it at least up to 10th or 11th.

Sri Kadidal MANJAPPA.—Up to 10th, I have no objection.

Sri Mulka GOVINDA REDDY (Chitaldrug),—We cannot understand the mentality of the Government. We are not for granting any time because they were so anxious to finish the Bill within 31st of March and now they are asking for further time.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಶ್ರೀಮಾನ್ ಭೀಮಪ್ಪನಾಯಕರು ಹೇಳುವ ತರಹ ನೋಡಿದರೆ ಮುಂದಿನ ವರ್ಷದವರೆಗೂ ಟೈಂ ಕೊಡಿ ಎಂದು ಹೇಳಿದ ಹಾಗೆ ಕಾಣುತ್ತದೆ. 10ನೆಯ ತಾರೀಖನ್ನು ನಿಗದಿ ಮಾಡಿದರೆ ಆಗಬಹುದು.

Sri S. SRINIVASA IYENGAR (T.-Narsipur).—The Legislative Council is programmed to meet on the 14th. We will be meeting on the 9th. So, before the Legislative Council meets, we can sit in Select Committee and complete it. If the time is granted up to 14th, it would be better.

Sri Kadidal MANJAPPA.—We can extend it up to 12th.

Mr. DEPUTY SPEAKER.—Yes. Motion moved :

> "That the time prescribed for the presentation of the Report of the Select Committee on the Mysore Sales Tax (Amendment) Bill, 1954, be extended till 12th April 1954."

The motion was adopted.

Mr. DEPUTY SPEAKER.—The House will now rise and meet tomorrow at 12 NOON.

The House adjourned at Five Minutes past Five of the Clock to meet at Twelve of the Clock on Thursday, the 1st April 1954.

WD 1581—GPB—550—31-7-54